www.bwssb.gov.in
caos@bwssb.gov.in

Fax : 080-22945102
Phone : 080-22945386

# ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

# BANGALORE WATER SUPPLY & SEWERAGE BOARD

1st Floor, Cauvery Bhavan, K.G.Road, Bangalore-560 009.

ಸಂಖ್ಯೆ : ಬೆಂಜಮಂ
No : BWSSB ]CHAPM/32-2017(P-IV)/EST32/3497/2021-22 ದಿನಾಂಕ Date ] 09.02.2022

## ಸುತ್ತೋಲೆ

ವಿಷಯ: ಮಂಡಳಿಯ 2018ರ ನೇಮಕಾತಿಗೆ ಅನುಗುಣವಾಗಿ ಸಹಾಯಕ, ಕಿರಿಯ ಸಹಾಯಕ, ಕೆಮಿಸ್ಟ್ ಗ್ರೇಡ್-2, ಆಪರೇಟರ್, ಎರಡನೇ ದರ್ಜೆ ಉಗ್ರಾಣ ಪಾಲಕ ಮತ್ತು ಬೆರಳಚ್ಚುಗಾರ-ಯಾ-ಡಿಇಓ ಹುದ್ದೆಯ ಮಿಕ್ಕುಳಿದ ಮತ್ತು ಸ್ಥಳೀಯ ವೃಂದದ ಅಂತಿಮ ಆಯ್ಕೆಪಟ್ಟಿಗೆ ಆಯ್ಕೆಗೊಂಡಿರುವ ಅಭ್ಯರ್ಥಿಗಳು ಶೈಕ್ಷಣಿಕ ವಿದ್ಯಾರ್ಹತೆಯ ಮೂಲ ದಾಖಲೆಗಳನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ:
1. ಸರಕಾರಿ ಆದೇಶ ಸಂಖ್ಯೆ: ಸಿಆಸುಇ 10 ಸೇನಿನಿ 2019 ದಿನಾಂಕ: 17.07.2019.
2. ದಿನಾಂಕ: 02.02.2022ರಂದು ಅಧಿಸೂಚಿಸಲಾದ ಸಹಾಯಕ, ಕಿರಿಯ ಸಹಾಯಕ, ಕೆಮಿಸ್ಟ್ ಗ್ರೇಡ್-2, ಆಪರೇಟರ್, ಎರಡನೇ ದರ್ಜೆ ಉಗ್ರಾಣ ಪಾಲಕ ಮತ್ತು ಬೆರಳಚ್ಚುಗಾರ-ಯಾ-ಡಿಇಓ ಹುದ್ದೆಯ ಮಿಕ್ಕುಳಿದ ಮತ್ತು ಸ್ಥಳೀಯ ವೃಂದದ ಅಂತಿಮ ಆಯ್ಕೆಪಟ್ಟಿಗಳು.

*****

ಮಂಡಳಿಯ 2018ರ ನೇಮಕಾತಿಗೆ ಸಂಬಂಧಿಸಿದಂತೆ ದಿನಾಂಕ: 02.02.2022 ರಂದು ಸಹಾಯಕ, ಕಿರಿಯ ಸಹಾಯಕ, ಕೆಮಿಸ್ಟ್ ಗ್ರೇಡ್-2, ಆಪರೇಟರ್, ಎರಡನೇ ದರ್ಜೆ ಉಗ್ರಾಣ ಪಾಲಕ ಮತ್ತು ಬೆರಳಚ್ಚುಗಾರ-ಯಾ-ಡಿಇಓ ಹುದ್ದೆಯ ಮಿಕ್ಕುಳಿದ ಮತ್ತು ಸ್ಥಳೀಯ ವೃಂದದ ಅಂತಿಮ ಆಯ್ಕೆಪಟ್ಟಿಗಳನ್ನು ಅಧಿಸೂಚಿಸಲಾಗಿರುತ್ತದೆ.

ಅಂತಿಮ ಆಯ್ಕೆಪಟ್ಟಿಗೆ ಆಯ್ಕೆಗೊಂಡ ಅಭ್ಯರ್ಥಿಗಳನ್ನು ನಿಗದಿತ ಹುದ್ದೆಗೆ ನೇಮಕ ಮಾಡುವ ಮುನ್ನ ಅಭ್ಯರ್ಥಿಗಳು ಸಲ್ಲಿಸಿರುವ ಅಂಕಪಟ್ಟಿ/ಶೈಕ್ಷಣಿಕ ಪ್ರಮಾಣ ಪತ್ರಗಳ ನೈಜತೆಯನ್ನು ಅವುಗಳನ್ನು ವಿತರಿಸಿದ ವಿಶ್ವವಿದ್ಯಾಲಯಗಳು/ಶೈಕ್ಷಣಿಕ ಪರೀಕ್ಷಾ ಮಂಡಳಿಗಳೊಂದಿಗೆ ಪರಿಶೀಲನೆ ನಡೆಸಿ, ಪರಿಶೀಲನೆಯ ನಂತರ ಅಂತಹ ಪ್ರಮಾಣ ಪತ್ರಗಳು ಸಂಬಂಧಿಸಿದ ವಿಶ್ವವಿದ್ಯಾಲಯಗಳು/ಶೈಕ್ಷಣಿಕ ಪರೀಕ್ಷಾ ಮಂಡಳಿಗಳಿಂದಲೇ ವಿತರಿಸಲಾದ ಪ್ರಮಾಣ ಪತ್ರಗಳೆಂದು ಖಾತ್ರಿಯಾದ ನಂತರವೇ ನೇಮಕಾತಿ ಆದೇಶ ಹೊರಡಿಸತಕ್ಕದೆಂದು ಸರಕಾರವು ಉಲ್ಲೇಖ (1)ರ ಆದೇಶದಲ್ಲಿ ಎಲ್ಲಾ ಆಯ್ಕೆ ಮತ್ತು ನೇಮಕಾತಿ ಪ್ರಾಧಿಕಾರಗಳಿಗೆ ನಿರ್ದೇಶನವನ್ನು ನೀಡಿರುತ್ತದೆ.

ಈ ಸಂಬಂಧ ಅಂತಿಮ ಆಯ್ಕೆಪಟ್ಟಿಗೆ ಆಯ್ಕೆಗೊಂಡ ಅಭ್ಯರ್ಥಿಗಳು ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆಯ ಸಂಬಂಧಿತ ಅಂಕಪಟ್ಟಿ/ಶೈಕ್ಷಣಿಕ ಪ್ರಮಾಣ ಪತ್ರಗಳ ನೈಜತಾ ವರದಿಯನ್ನು ಪಡೆಯುವ ನಿಟ್ಟಿನಲ್ಲಿ ಮೂಲ ಅಂಕಪಟ್ಟಿ/ಪದವಿ ಪ್ರಮಾಣ ಪತ್ರಗಳ ಅವಶ್ಯಕತೆ ಇರುವುದರಿಂದ ದಿನಾಂಕ: 02.02.2022 ರಂದು ಅಧಿಸೂಚಿಸಲಾದ ಸಹಾಯಕ, ಕಿರಿಯ ಸಹಾಯಕ, ಕೆಮಿಸ್ಟ್ ಗ್ರೇಡ್-2, ಆಪರೇಟರ್, ಎರಡನೇ ದರ್ಜೆ ಉಗ್ರಾಣ ಪಾಲಕ ಮತ್ತು ಬೆರಳಚ್ಚುಗಾರ-ಯಾ-ಡಿಇಓ ಹುದ್ದೆಯ ಮಿಕ್ಕುಳಿದ ಮತ್ತು ಸ್ಥಳೀಯ ವೃಂದದ ಅಂತಿಮ ಆಯ್ಕೆಪಟ್ಟಿಗಳಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳು ಮಾತ್ರ ದಿನಾಂಕ: 15.02.2022ರ ಸಂಜೆ 5.30ರ ಒಳಗೆ ಪದವಿ

ಅಂಕಪಟ್ಟಿಗಳು ಮತ್ತು ಪ್ರಮಾಣ ಪತ್ರ(ಸಹಾಯಕ ಹುದ್ದೆಯ ಅಭ್ಯರ್ಥಿಗಳು), ಪಿಯುಸಿ ಅಂಕಪಟ್ಟಿ ಅಥವಾ ತತ್ಸಮಾನ ಅಂಕಪಟ್ಟಿ(ಕಿರಿಯ ಸಹಾಯಕ), ಎಂ.ಎಸ್ಸಿ ಅಂಕಪಟ್ಟಿಗಳು ಮತ್ತು ಪ್ರಮಾಣ ಪತ್ರ(ಕೆಮಿಸ್ಟ್ ಗ್ರೇಡ್-2 ಹುದ್ದೆಯ ಅಭ್ಯರ್ಥಿ), ಪಿಯುಸಿ ಮತ್ತು ಎಲೆಕ್ಟ್ರಿಷಿಯನ್ ಟ್ರೇಡ್‌ನಲ್ಲಿ ಐಟಿಐ ವಿದ್ಯಾರ್ಹತೆಯ ಅಂಕಪಟ್ಟಿಗಳು ಮತ್ತು ಪ್ರಮಾಣ ಪತ್ರ(ಆಪರೇಟರ್ ಹುದ್ದೆಯ ಅಭ್ಯರ್ಥಿಗಳು), ಪಿಯುಸಿ ಮತ್ತು Material Management ಕೋರ್ಸ್‌ಗೆ ಸಂಬಂಧಿಸಿದಂತೆ ಅಂಕಪಟ್ಟಿಗಳು ಮತ್ತು ಪ್ರಮಾಣ ಪತ್ರ(ಎರಡನೇ ದರ್ಜೆ ಉಗ್ರಾಣ ಪಾಲಕ ಹುದ್ದೆಯ ಅಭ್ಯರ್ಥಿಗಳು) ಮತ್ತು ಪಿಯುಸಿ ಅಂಕಪಟ್ಟಿ ಅಥವಾ ತತ್ಸಮಾನ ಅಂಕಪಟ್ಟಿ ಹಾಗೂ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಸೀನಿಯರ್ ಗ್ರೇಡ್ ಟೈಪಿಂಗ್ ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳನ್ನು(ಬೆರಳಚ್ಚುಗಾರ-ಯಾ-ಡಿಇಓ ಹುದ್ದೆಯ ಅಭ್ಯರ್ಥಿಗಳು) ಸಹಾಯಕ ಸಿಬ್ಬಂದಿ ವ್ಯವಸ್ಥಾಪಕರ ಶಾಖೆ, ಕೊಠಡಿ ಸಂಖ್ಯೆ- 309, 3ನೇ ಮಹಡಿ, ಕಾವೇರಿ ಭವನ, ಬೆಂಗಳೂರು ಜಲ ಮಂಡಳಿ, ಕೆ.ಜಿ.ರಸ್ತೆ, ಬೆಂಗಳೂರು- 560 009 ಇಲ್ಲಿ ಖುದ್ದು ಹಾಜರಾಗಿ ಸಲ್ಲಿಸುವಂತೆ ಸೂಚಿಸಲಾಗಿದೆ.

ಉಳಿದಂತೆ ಹೆಚ್ಚುವರಿ ಪಟ್ಟಿಗೆ ಆಯ್ಕೆಗೊಂಡ ಅಭ್ಯರ್ಥಿಗಳಿಗೆ ಈ ಸುತ್ತೋಲೆ ಅನ್ವಯಿಸುವುದಿಲ್ಲ. ಹಾಗೂ ಮೇಲೆ ತಿಳಿಸಿರುವ ದಾಖಲೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳನ್ನು ಪ್ರಸ್ತುತ ಸ್ವೀಕರಿಸುವುದಿಲ್ಲ.

9/2/22

**ಮುಖ್ಯ ಆಡಳಿತಾಧಿಕಾರಿ ಹಾಗೂ ಕಾರ್ಯದರ್ಶಿ,**
**ಬೆಂಗಳೂರು ಜಲಮಂಡಳಿ**

09/02/22 9/2/2022

**ಪ್ರತಿ:** ಸಹಾಯಕ, ಕಿರಿಯ ಸಹಾಯಕ, ಕೆಮಿಸ್ಟ್ ಗ್ರೇಡ್-2, ಆಪರೇಟರ್, ಎರಡನೇ ದರ್ಜೆ ಉಗ್ರಾಣ ಪಾಲಕ ಮತ್ತು ಬೆರಳಚ್ಚುಗಾರ-ಯಾ-ಡಿಇಓ ಹುದ್ದೆಯ ಮಿಕ್ಕುಳಿದ ಮತ್ತು ಸ್ಥಳೀಯ ವೃಂದದ ಅಂತಿಮ ಆಯ್ಕೆಪಟ್ಟಿಗಳಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳ ಮಾಹಿತಿಗಾಗಿ ಸೂಚನಾ ಫಲಕದಲ್ಲಿರಿಸಿದೆ ಹಾಗೂ ಮಂಡಳಿಯ ಅಂತರ್ಜಾಲದಲ್ಲಿ ಅಳವಡಿಸಿದೆ.